# ಕರ್ನಾಟಕ ಸರ್ಕಾರದ ನಡವಳಿ

**ವಿಷಯ:** ಶ್ರೀ ಭಾಸ್ಕರ, ಪಂಚಾಯಿತಿ ಅಭಿವೃದ್ಧಿ ಅಧಿಕಾರಿ, ಆಲೂರು, ಗ್ರಾಮಪಂಚಾಯತಿ ಮತ್ತು ಅಂಚೆ, ದಾಸನಪುರ ಹೋಬಳಿ, ಬೆಂಗಳೂರು, ಇವರ ವಿರುದ್ಧ ಇಲಾಖಾ ವಿಚಾರಣೆ ನಡೆಸಲು ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ, ಮತ್ತು ಮೇಲ್ಮನವಿ) ನಿಯಮಾವಳಿಗಳು 1957ರ ನಿಯಮ 14ಎ ಅಡಿಯಲ್ಲಿ ಮಾನ್ಯ ಉಪಲೋಕಯುಕ್ತರಿಗೆ ವಹಿಸುವ ಬಗ್ಗೆ – ಆದೇಶ.

**ಓದಲಾಗಿದೆ:** ನಿಬಂಧಕರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು, ಇವರ **D.O.No. Compt/UPLOK/BCD-2662/2013/ARE-9, ದಿ: 31.07.2017.**

**ಪ್ರಸ್ತಾವನೆ:**

ಮೇಲೆ ಓದಲಾದ ನಿಬಂಧಕರು, ಕರ್ನಾಟಕ ಲೋಕಾಯುಕ್ತ, ಇವರ ಪತ್ರದ ಸಂಗಡ ಕಳುಹಿಸಿರುವ ಮಾನ್ಯ ಉಪಲೋಕಾಯುಕ್ತರು ದಿನಾಂಕ: 25.07.2016 ರಂದು ಕರ್ನಾಟಕ ಲೋಕಾಯುಕ್ತ ಕಾಯಿದೆ 1984ರ ಕಲಂ 12(3)ರ ಅನ್ವಯ ಸಲ್ಲಿಸಿರುವ ವರದಿಯಲ್ಲಿ ಶ್ರೀ ಹರೀಶ್ ಕುಮಾರ್ ಆರ್, ಆಲೂರು ಅಂಚೆ, ದಾಸನಪುರ ಹೋಬಳಿ, ಬೆಂಗಳೂರು ಉತ್ತರ ತಾಲ್ಲೂಕು, ಬೆಂಗಳೂರು (ಇನ್ನು ಮುಂದೆ "ದೂರುದಾರರು" ಎಂದು ಕರೆಯಲ್ಪಡುತ್ತಾರೆ) ತಮ್ಮ ದೂರಿನಲ್ಲಿ (1) ಶ್ರೀ ಭಾಸ್ಕರ, ಪಂಚಾಯಿತಿ ಅಭಿವೃದ್ಧಿ ಅಧಿಕಾರಿ, ಆಲೂರು ಗ್ರಾಮಪಂಚಾಯತಿ ಮತ್ತು ಅಂಚೆ, ದಾಸನಪುರ ಹೋಬಳಿ, ಬೆಂಗಳೂರು ಹಾಗೂ 2) ಶ್ರೀಮತಿ ನೀಲಮ್ಮ, ಹಿಂದಿನ ಅಧ್ಯಕ್ಷೆ ಹಾಗೂ ಸದಸ್ಯರು, ಆಲೂರು ಗ್ರಾಮಪಂಚಾಯತಿ ಮತ್ತು ಅಂಚೆ, ದಾಸನಪುರ ಹೋಬಳಿ, ಬೆಂಗಳೂರು (ಇನ್ನು ಮುಂದೆ 1 ಮತ್ತು 2ನೇ "ಎದುರುದಾರರು" ಎಂದು ಕರೆಯಲ್ಪಡುತ್ತಾರೆ) ರವರ ವಿರುದ್ಧ ನೀಡಿದ ದೂರನ್ನು ಕರ್ನಾಟಕ ಲೋಕಾಯುಕ್ತ ಕಾಯಿದೆಯ ಕಲಂ 9ರ ಅಡಿಯಲ್ಲಿ ತನಿಖೆಗೆ ತೆಗೆದುಕೊಳ್ಳಲಾಗಿದೆ.

ದೂರುದಾರರು ತಮ್ಮ ದೂರಿನಲ್ಲಿ ಆಲೂರು ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ 2012–13ನೇ ಸಾಲಿನಲ್ಲಿ ಆಶ್ರಯ ಗ್ರಾಮೀಣ ನಿವೇಶನ ಯೋಜನೆಯಲ್ಲಿ ಆಲೂರು ಪಾಳ್ಯದ ಸ.ನಂ.25 ರಲ್ಲಿ ನಿವೇಶನಗಳ ಹಂಚಿಕೆಯಲ್ಲಿ ಅರ್ಹ ಹಲವಾರು ಬಡ–ಜನರಿಗೆ ಮೋಸಮಾಡಿ, ಆಲೂರು ಗ್ರಾಮ ಪಂಚಾಯಿತಿ ಅಧ್ಯಕ್ಷರು ಮತ್ತು ಸಂಬಂಧಪಟ್ಟ ನೌಕರರು ಸೇರಿಕೊಂಡು ಹಣವನ್ನು ಪಡೆದು ಅರ್ಹರಲ್ಲದ ವ್ಯಕ್ತಿಗಳಿಗೆ ನಿವೇಶನಗಳನ್ನು ಹಂಚಿಕೆ ಮಾಡಿರುತ್ತಾರೆ. ಈ ಅವ್ಯವಹಾರದ ಕುರಿತು ತನಿಖೆಗೆ ಆದೇಶಿಸಬೇಕೆಂದು ಕೋರಿರುತ್ತಾರೆ.

1ನೇ ಎದುರುದಾರರಾದ ಶ್ರೀ ಭಾಸ್ಕರ, ಪಂಚಾಯಿತಿ ಅಭಿವೃದ್ಧಿ ಅಧಿಕಾರಿ ರವರು ಸರ್ಕಾರದ ಆದೇಶ ಹಾಗೂ ರಾಜೀವ ಗಾಂಧಿ, ವಸತಿ ನಿಗಮದವರು ಹೊರಡಿಸಿರುವ ಮಾರ್ಗಸೂಚಿ ಪತ್ರದ ಸಂ.ಆರ್.ಜಿ.ಆರ್.ಎಚ್.ಸಿ.ಎಲ್/02 ಎಚ್.ಎಸ್.ಎ/20/201. 11036, ದಿ:21/6/2010ರ ಪತ್ರದಲ್ಲಿ ತಿಳಿಸಿರುವಂತೆ ಫಲಾನುಭವಿಗಳನ್ನು ಆಯ್ಕೆ ಮಾಡಲಾಗಿರುತ್ತದೆ. ಸರ್ಕಾರದ ಸುತ್ತೋಲೆಯಲ್ಲಿ ಮಹಿಳಾ ಫಲಾನುಭವಿಗಳಿಗೆ ಹಕ್ಕುಪತ್ರ ನೀಡಬೇಕೆಂದು ಮತ್ತು ಫಲಾನುಭವಿಗಳನ್ನು ಗ್ರಾಮ ಸಭೆಯಲ್ಲಿ ಅನುಮೋದಿಸಬೇಕೆಂದು ಮತ್ತು ಪ್ರಕ್ರಿಯೆ ನಡೆದ ನಂತರ ಅನರ್ಹ ಫಲಾನುಭವಿಗಳು ಇದ್ದಲ್ಲಿ ಪಟ್ಟಿಯನ್ನು ತಾಲ್ಲೂಕು ಮಟ್ಟದ ಜಾಗೃತಿ ಸಮಿತಿಯಲ್ಲಿ ಮಂಡಿಸಲು ಅವಕಾಶವಿದ್ದು, ಈ ಸಮಿತಿಯು ಪಟ್ಟಿಯನ್ನು ಪರಿಶೀಲಿಸಿ, ಅನರ್ಹ ಫಲಾನುಭವಿಗಳು ಇದ್ದಲ್ಲಿ ಅವುಗಳನ್ನು ಕೈಬಿಟ್ಟು ಅರ್ಹ ಫಲಾನುಭವಿಗಳಿಗೆ ನಿವೇಶನ ಮಂಜೂರು ಮಾಡಲು ಜಾಗೃತ ಸಮಿತಿ ಅಧಿಕಾರವಿರುತ್ತದೆ.

ಮೇಲ್ಕಂಡ ದಿ:21/6/2010ರ ಮಾರ್ಗಸೂಚಿಯಂತೆ, ಆಲೂರು ಪಾಳ್ಯದ ಸ.ನಂ.25ರಲ್ಲಿ ನೀಡಿರುವ ಎಲ್ಲಾ ಹಕ್ಕುಪತ್ರಗಳನ್ನು ದಿ:14/7/2011 ರಂದು ನಡೆದ ಗ್ರಾಮ ಸಭೆಯಲ್ಲಿ ಆಯ್ಕೆ ಮಾಡಲಾಗಿರುತ್ತದೆ. ಸರ್ಕಾರದ ಸುತ್ತೋಲೆಯಲ್ಲಿ ಮಹಿಳಾ ಫಲಾನುಭವಿಗಳನ್ನು ಆಯ್ಕೆ ಮಾಡಲಾಗಿರುತ್ತದೆ. ಆಯ್ಕೆ ಮಾಡಿದ ಫಲಾನುಭವಿಗಳಲ್ಲಿ ಶೇ.50ಕ್ಕಿಂತ ಜಾಸ್ತಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಕ್ಕೆ ಸೇರಿದ ಫಲಾನುಭವಿಗಳಾಗಿದ್ದು, ಉಳಿದ ಫಲಾನುಭವಿಗಳು ಹಿಂದುಳಿದ ವರ್ಗಕ್ಕೆ ಸೇರಿದ ಫಲಾನುಭವಿಗಳಾಗಿರುತ್ತಾರೆ. ಗ್ರಾಮ ಸಭೆಯಲ್ಲಿ ಫಲಾನಿಭವಿಗಳು ಆಯ್ಕೆಯಾದ ನಂತರ ಪಟ್ಟಿಯನ್ನು ಗ್ರಾಮ ಪಂಚಾಯಿತಿ ಸರ್ವ ಸದಸ್ಯರ ಸಭೆಯಲ್ಲಿ ದಿ:23/2/2016 ರಂದು ಮಂಡಿಸಿದ್ದು, ಗ್ರಾಮ ಪಂಚಾಯಿತಿ ಸಾಮಾನ್ಯ ಸಭೆ ಸಹ ಗ್ರಾಮ ಸಭೆ ಆಯ್ಕೆ ಮಾಡಿದ ಫಲಾನುಭವಿಗಳಿಗೆ ನಿವೇಶನ ಮಂಜೂರು ಮಾಡಲು ಸರ್ವಾನುಮತದಿಂದ ತೀರ್ಮಾನಿಸಲಾಗಿದೆ.

ನಿವೇಶನ ರಹಿತರಿಗೆ ನಿವೇಶನ ಮಂಜೂರು ಮಾಡಲು ಎಲ್ಲಾ ದಾಖಲಾತಿಗಳನ್ನು, ಪ್ರಸ್ತಾವನೆಯನ್ನು ತಾಲ್ಲೂಕು ಪಂಚಾಯಿತಿಗೆ ಸಲ್ಲಿಸಲಾಗಿರುತ್ತದೆ. ಗ್ರಾಮ ಸಭೆಯಲ್ಲಿ ಅನರ್ಹ ಫಲಾನುಭವಿಗಳನ್ನು ಆಯ್ಕೆ ಮಾಡಿದ್ದಲ್ಲಿ ಕೈಬಿಡಲು ಜಾಗೃತಿ ಸಮಿತಿಗೆ ಅಧಿಕಾರ ನೀಡಲಾಗಿರುತ್ತದೆ. ಅದರಂತೆ ದಿ:12/3/12 ರಂದು ಗ್ರಾಮ ಸಭೆ ಆಯ್ಕೆ ಮಾಡಿದ ಪಟ್ಟಿಯನ್ನು

2..

ಜಾಗೃತಿ ಸಮಿತಿ ಸಭೆಯಲ್ಲಿ ಮಂಡಿಸಲಾಗಿ ಪಟ್ಟಿಯನ್ನು ಪರಿಶೀಲಿಸಿ ಅನುಮೋದಿಸಿರುತ್ತದೆ ಮತ್ತು ಗ್ರಾಮ ಸಭೆಯಲ್ಲಿ ಆಯ್ಕೆಯಾದ ಎಲ್ಲಾ ಫಲಾನುಬವಿಗಳಿಗೆ ನಿವೇಶನದ ಹಕ್ಕು ಪತ್ರ ನೀಡಲು ಸರ್ವಾನುಮತದಿಂದ ತೀಮಾನಿಸಿರುತ್ತಾರೆ. ಸರ್ಕಾರದ ಮಾರ್ಗಸೂಚಿಯಂತೆ ಗ್ರಾಮ ಪಂಚಾಯಿತಿ ಸರ್ವ ಸದಸ್ಯ ಸಭೆ ಮತ್ತು ಜಾಗೃತಿ ಸಮಿತಿ ಸಭೆ ಅನುಮೋದಿಸಿದ್ದು ನಂತರ ಅನುಮೋದನೆಗೆ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯಿತಿ ಬೆಂಗಳೂರು ಜಿಲ್ಲೆ ರವರ ಮುಖಾಂತರ ಜಿಲ್ಲಾಧಿಕಾರಿಗಳ ಶಿಫಾರಸ್ಸನ್ನು ಅನುಮೋದಿಸಿ ನಿವೇಶನ ರಹಿತರಿಗೆ ಹಕ್ಕುಪತ್ರವನ್ನು ನೀಡಿರುತ್ತಾರೆ.

ಮೇಲೆ ಹೇಳಿದ ರೀತಿಯಂತೆ ಕಾನೂನು ಬದ್ಧವಾಗಿ ಫಲಾನುಭವಿಗಳ ಆಯ್ಕೆಯ ಪಟ್ಟಿಯ ಅನುಮೋದನೆಯ ಮೇರೆಗೆ ಹಕ್ಕುಪತ್ರವನ್ನು ನೀಡಲಾಗಿರುತ್ತದೆ ಹಾಗೂ ಸತ್ಯದಿಂದ ಕೂಡಿರುತ್ತದೆ ಯಾರಿಂದಲೂ ಹಣವನ್ನು ಸ್ವೀಕರಿಸಿರುವುದಿಲ್ಲವೆಂದು ನಿವೇದಿಸಿದೆ.

ಎದುರುದಾರರಾದ ನೀಲಮ್ಮ, ಆಲೂರು ಗ್ರಾಮ ಪಂಚಾಯಿತಿ ಸದಸ್ಯರು 1ನೇ ಎದುರುದಾರರು ಹೇಳಿರುವ ರೀತಿಯಲ್ಲಿ ಫಲಾನುಭವಿಗಳಿಗೆ ಹಕ್ಕುಪತ್ರವನ್ನು ನೀಡಲಾಗಿದೆ. ಇವರ ಅವಧಿಯಲ್ಲಿ ಹಣ ದುರುಪಯೋಗವಾಗಲಿ ಅಥವಾ ಲೋಬಿತನಕ್ಕೆ ಕೈ ನೀಡದೆ ದಕ್ಷೆಯಿಂದ ಕರ್ತವ್ಯ ನಿರ್ವಹಿಸಿರುತ್ತೇನೆ ಎಂಬುದಾಗಿ ಹೇಳಿರುತ್ತಾರೆ.

ದೂರುದಾರರು ತಮ್ಮ ಪ್ರತ್ಯುತ್ತರದಲ್ಲಿ 1 ಮತ್ತು 2ನೇ ಎದುರುದಾರರ ಆಕ್ಷೇಪಣೆಗಳಲ್ಲಿ ಹೇಳಿರುವಂತೆ ಶೇ.50ಕ್ಕಿಂತ ಜಾಸ್ತಿ ಎಸ್.ಸಿ/ಎಸ್.ಟಿ ಸೇರಿದ್ದು ಸತ್ಯಾಂಶದಿಂದ ಕೂಡಿರುತ್ತದೆ. ಆದರೆ, ಅವರಿಗೆ ಈಗಾಗಲೇ ನಿವೇಶನ ಇರುವುದನ್ನು ಖುದ್ದು ಇದೇ ಗ್ರಾಮದವರಾದ ಇವರು ಅವರ ಕುಟುಂಬ ಸದಸ್ಯರ ಹೆಸರಿನಲ್ಲಿ ಅನೇಕ ವರ್ಷದಿಂದ ಗಮನಿಸಿರುತ್ತಾರೆ.

ಪಟ್ಟಿಯಲ್ಲಿ 282 ಜನರ ನಿವೇಶನ ಸಂಖ್ಯೆ ಇದ್ದು 2 ನಿವೇಶನಗಳನ್ನು ಪಂಚಾಯಿತಿಯ ಹೆಸರಿನಲ್ಲಿದ್ದು, ಉಳಿದ ಎಲ್ಲಾ ನಿವೇಶನಗಳನ್ನು ಆಲೂರಿನಲ್ಲಿ ವಾಸಮಾಡುತ್ತಿರುವ ಫಲನುಭವಿಗಳ ಹೆಸರಿನಲ್ಲಿರುವುದು ಅನುಬಂಧ-2, ಪಿ.1 ರಿಂದ ಪಿ.11 ರಲ್ಲಿ ಗಮನಿಸಬಹುದು. ಆದರೆ, ಇವರು ನೀಡಿರುವ ದಾಖಲೆಯಲ್ಲಿ ಆಲೂರು ಗ್ರಾಮದ ಮತದಾರರ ಪಟ್ಟಿಯನ್ನು ಲಗತ್ತಿಸಿದ್ದು ಅದರಲ್ಲಿ ಕೇವಲ 101 ಫಲಾನುಭವಿಗಳು ಕಂಡುಬಂದಿದ್ದು ಅದನ್ನು ಗುರುತಿಸಲಾಗಿದೆ. ಉಳಿದ ಫಲಾನುಭವಿಗಳು ಯಾವ ಗ್ರಾಮಕ್ಕೆ ಸೇರಿರುತ್ತಾರೆಂದು ತಿಳಿದುಬಂದಿರುವುದಿಲ್ಲ. ಆಲೂರು ಗ್ರಾಮದಲ್ಲಿ ಹುಟ್ಟಿಬೆಳೆದ ಇವರು ಯಾರು ಶ್ರೀಮಂತರು ಮತ್ತು ಬಡವರು ಸುಮಾರು ವರ್ಷಗಳಿಂದ ನೋಡಿಯೇ ಬೆಳೆದಿರುತ್ತಾರೆ. ಹಾಗೆಯೇ ಫಲಾನುಭವಿಗಳು ಇವರ ಊರಿನವರಾಗಿ ಫಲಾನುಭವಿಗಳನ್ನು ಸುಲಭವಾಗಿ ಗುರುತಿಸಬಲ್ಲರು. ಆಲೂರು ಗ್ರಾಮ ಪಂಚಾಯಿತಿಗೆ ಒಟ್ಟು 8 ಹಳ್ಳಿಗಳು ಸೇರಿದ್ದು, ಆಲೂರಿನ ಫಲಾನುಭವಿಗಳಿಗೆ ಹೆಚ್ಚು ಸಹಕಾರ ನೀಡಿ ಉಳಿದ ಗ್ರಾಮಗಳಿಂದ ಈ ಯೋಜನೆಯಡಿಯಲ್ಲಿ ಅರ್ಜಿ ಬಂದಿದ್ದರೂ ಕಡೆಗಣಿಸಲಾಗಿದೆ. ಆಶ್ರಯ ಗ್ರಾಮೀಣ ನಿವೇಶನ ಯೋಜನೆಯಲ್ಲಿ ಸುಮಾರು 60% ರಷ್ಟು ಫಲಾನುಭವಿಗಳ ಕುಟುಂಬ ಸದಸ್ಯರ ಹೆಸರಿನಲ್ಲಿ ಆಸ್ತಿ ಇರುವುದನ್ನು ಕಂಡಿರುತ್ತೇನೆ ಎಂಬುದಾಗಿ ತಿಳಿಸಿರುತ್ತಾರೆ.

**ಕಡತ ಮತ್ತು ದಾಖಲಾತಿಗಳನ್ನು ಕೂಲಂಕುಷವಾಗಿ ಪರಿಶೀಲಿಸಲಾಯಿತು**

ಆಲೂರು ಪಾಳ್ಯ ಗ್ರಾಮದ ಸ.ನಂ.25ರಲ್ಲಿ ಆಶ್ರಯ ಯೋಜನೆಯಲ್ಲಿ ಸರ್ಕಾರದ ಆದೇಶ ಮತ್ತು ರಾಜೀವ ಗಾಂಧಿ ಗ್ರಾಮೀಣ ವಸತಿ ನಿಗಮದವರು ಹೊರಡಿಸಿರುವ ಮಾರ್ಗಸೂಚಿ ಸಂಖ್ಯೆ:ಆರ್.ಜಿ.ಆರ್.ಎಚ್.ಸಿ.ಎಲ್./02 ಎಚ್.ಎಸ್.ಎ. 20/2001, 11036 ದಿ:21/6/2010ರ ಪತ್ರದಂತೆ ತಿಳಿಸಿರುವಂತೆ ಫಲಾನುಭವಿಗಳನ್ನು ಆಯ್ಕೆ ಮಾಡಲಾಗಿರುತ್ತದೆ. ಯಾವ ಫಲಾನುಭವಿಗಳು ಅರ್ಹರೆಂದು ಹೇಳಲು ಸರ್ಕಾರವು ಆದೇಶ ಮಾಡಿರುತ್ತದೆ. ಅದಕ್ಕನುಗುಣವಾಗಿ ಫಲಾನುಭವಿಗಳ ಪಟ್ಟಿಯನ್ನು ಮಾಡಬೇಕು. ಸರ್ಕಾರದ ಸುತ್ತೋಲೆಯಲ್ಲಿ ಅರ್ಹತೆಯನ್ನು ಹೊಂದಲು ಫಲಾನುಭವಿಗಳು ಅರ್ಜಿದಾರರ ಕುಟುಂಬವು ಆರ್ಥಿಕವಾಗಿ ಮತ್ತು ಸಾಮಾಜಿಕವಾಗಿ ಹಿಂದುಳಿದಿದ್ದು ವಾರ್ಷಿಕ ಆದಾಯ ರೂ.32.000/- ಗಿಂತ ಕಡಿಮೆ ಇರಬೇಕು, ವಸತಿ ರಹಿತವಾಗಿದ್ದು, ಅರ್ಜಿದಾರರು ಅಥವಾ ಕುಟುಂಬದ ಯಾವುದೇ ಸದಸ್ಯರ ಹೆಸರಿನಲ್ಲಿ ಕರ್ನಾಟಕ ಯಾವುದೇ ಭಾಗದಲ್ಲಿ ಸ್ವಂತ ಮನೆಯನ್ನು ಹೊಂದಿರಬಾರದು. ಶಿಥಿಲಗೊಂಡ ಮನೆ ಅಥವಾ ಗುಡಿಸಲಿನಲ್ಲಿ ವಾಸಿಸುತ್ತಿರುವವರು ಅರ್ಹರಾಗಿರುತ್ತಾರೆ ಮತ್ತು ಬೇರೆ ಯಾವುದೇ ಯೋಜನೆ ಇಲಾಖೆಯಿಂದ ವಸತಿ ಸೌಲಭ್ಯವನ್ನು ಪಡೆದಿರಬಾರದು ಎಂಬುದಾಗಿರುತ್ತದೆ. ಆದರೆ, ಮೂಲತಃ 1ನೇ ಎದುರುದಾರರು 2011-12ನೇ ಸಾಲಿನ ಗ್ರಾಮ ಸಭೆಯಲ್ಲಿ ಯಾವ ಆಧಾರದ ಮೇಲೆ ಫಲಾನುಭವಿಗಳ ಪಟ್ಟಿಯನ್ನು ತಯಾರು ಮಾಡಿದರು ಎಂಬುದಾಗಿ ಹೇಳಿರುವುದಿಲ್ಲ. ಆದರೆ, ಆಶ್ರಯ ನಿವೇಶನಗಳಿಗೆ ಬಂದ ಅರ್ಜಿಗಳ ವಿವರಗಳನ್ನು 01 ರಿಂದ 848ರ ವರೆಗೂ ತಿಳಿಸಿರುತ್ತಾರೆ. ಇದೇ ರೀತಿಯಾಗಿ ದಿ:23/2/2012 ರಂದು 2ನೇ ಎದುರುದಾರರು ಪಂಚಾಯಿತಿ ಅಧ್ಯಕ್ಷರಾದ ಸಂದರ್ಭದಲ್ಲಿ ಸರ್ವೆ ನಂ.25ರ ಆಶ್ರಯ ನಿವೇಶನಗಳಿಗೆ ಫಲಾನುಭವಿಗಳ ಆಯ್ಕೆ ಮಾಡಲು ಸಭೆಯನ್ನು ಕೋರಿ ಅನುಮೋದಿಸಿರುತ್ತಾರೆ. ಅಂದರೆ, 1 ರಿಂದ 281 ಫಲಾನುಭವಿಗಳನ್ನು ಅನುಮೋದಿಸಿರುತ್ತಾರೆ ಹಾಗೂ ಇವರಿಗೆ ಹಕ್ಕು ಪತ್ರಗಳನ್ನು ಸಹ ನೀಡಿರುತ್ತಾರೆ. ಇದಕ್ಕೆ ತದ್ವಿರುದ್ಧವಾಗಿ ದೂರುದಾರರು ಹಕ್ಕು ಪತ್ರ ಫಲಾನುಭವಿಗಳ ವಿವರ ಅನುಬಂಧ-2 ಪುಟ-1 ರಿಂದ 11ರಲ್ಲಿ ನೀಡಿರುವ ದಾಖಲಾತಿಗಳಲ್ಲಿ-ಆಲೂರು ಗ್ರಾಮದ ಮತದಾರರ ಪಟ್ಟಿಯನ್ನು ಲಗತ್ತಿಸಿದ್ದು ಇದರಲ್ಲಿ ಕೇವಲ 101 ಫಲಾನುಭವಿಗಳು ಕಂಡುಬಂದಿದ್ದು ಎಂದು ಗುರುತಿಸಲಾಗಿದೆ. ಈ 101 ಫಲಾನುಭವಿಗಳು ಎದುರುದಾರರು ತೋರಿಸಿರುವ 282

ಫಲಾನುಭವಿಗಳ ಪಟ್ಟಿಯಲ್ಲಿ ಸೇರಿರುತ್ತಾರೆ. ಆದರೆ, ಉಳಿದ ಫಲಾನುಭವಿಗಳ ಪಟ್ಟಿಯನ್ನು ತಯಾರು ಮಾಡುವಾಗ ಪ್ರತಿಯೊಬ್ಬ ಫಲಾನುಭವಿಗಳ ಕುಟುಂಬವು ಆರ್ಥಿಕವಾಗಿ ಸಾಮಾಜಿಕವಾಗಿ ಹಿಂದುಳಿದಿದ್ದು ವಾರ್ಷಿಕ ಆದಾಯ ರೂ.32,000/- ಗಿಂತ ಯಾವುದೇ ಯೋಜನೆಯಡಿ ವಸತಿ ಸೌಲಭ್ಯ ಪಡೆದಿರಬಾರದು ಎಂದು ತಿಳಿಸಿರುವುದಿಲ್ಲ. ಈ ಮಾಹಿತಿಯನ್ನು ತಿಳಿಸದೇ ಇದ್ರೂ ಸಹ 282 ಫಲಾನುಭವಿಗಳಗೆ ಹಕ್ಕು ಪತ್ರವನ್ನು ಬಿಡುಗಡೆ ಮಾಡಿರುತ್ತಾರೆ. ಈ ಬಿಡುಗಡೆಯನ್ನು ಯಾವ ಆಧಾರದ ಮೇಲೆ ಮಾಡಿದರು ಎಂಬುದನ್ನು ತೋರಿಸಲು ಅರ್ಜಿದಾರರು ಸಲ್ಲಿಸಿದ ವಾರ್ಷಿಕ ಆದಾಯ ಪತ್ರ ಹಾಗೆ ಯಾವುದೇ ಯೋಜನೆ ಅಡಿಯಲ್ಲಿ ಅವರ ಕುಟುಂಬ ಸದಸ್ಯರನ್ನು ಒಳಗೊಂಡ ವಸತಿಯನ್ನು ಪಡೆದಿಲ್ಲ ಎನ್ನುವುದನ್ನು ತಿಳಿಸಿಲ್ಲ. ಈ ರೀತಿಯಾಗಿ ಅರ್ಹ ಹಲವಾರು ಬಡ ಜನರಿಗೆ ಮೋಸ ಮಾಡಿರುತ್ತಾರೆ.

ಶೇ. 50ಕ್ಕಿಂತ ಜಾಸ್ತಿ ಎಸ್.ಸಿ/ ಎಸ್.ಟಿ ರವರಿಗೆ ನಿವೇಶನ ನೀಡಿರುತ್ತಾರೆ ಆದರೆ, ಇವರುಗಳಲ್ಲಿ ಹಲವಾರು ಜನ ನಿವೇಶನ ಇರುವುದನ್ನು ತೆಗೆದುಕೊಂಡಿರುವುದಿಲ್ಲ. ಆಲೂರು ಗ್ರಾಮದಲ್ಲಿ ಒಟ್ಟು 8 ಹಳ್ಳಿಗಳಿದ್ದು ಫಲಾನುಭವುಗಳಿಗೆ ಇತರ ಹಳ್ಳಿ ಜನರನ್ನು ಫಲಾನುಭವಿಗಳನ್ನಾಗಿ ಮಾಡಿಲ್ಲ ತದ ಕಾರಣ ಆಲೂರು ವಾಸಿಗಳಿಗೆ ಮಾತ್ರ ಫಲಾನುಭವಿಗಳನ್ನು ಮಾಡಿರುತ್ತಾರೆ ಇದಕ್ಕೆ ಕಾರಣ ತಿಳಿಸಿಲ್ಲ. ದೂರುದಾರರು ಸದರಿ ಆಕ್ಷೇಪಣೆಗಳಿಗೆ ಪ್ರತ್ಯುತ್ತರವಾಗಿ ಕ್ರಮಜರುಗಿಸಲು ಮತ್ತು ಬರಬೇಕಾದ ಹಣವನ್ನು ಬಡ್ಡಿ ಸಮೇತ ಕೊಡಿಸಬೇಕೆಂದು ಕೇಳಿರುತ್ತಾರೆ.

ಈ ಮೇಲ್ಕಂಡ ಎಲ್ಲಾ ವಿಚಾರಗಳನ್ನು ಪರಿಶೀಲಿಸಿದಾಗ, ಎದುರುದಾರರು ಸಾರ್ವಜನಿಕ ನೌಕರರಾಗಿ ತಮ್ಮ ಕರ್ತವ್ಯ ನಿರ್ವಹಣೆಯಲ್ಲಿ ನಿಷ್ಠೆ ಇಲ್ಲದೆ, ಕರ್ತವ್ಯಲೋಪ ಎಸಗಿ ಸಾರ್ವಜನಿಕ ನೌಕರರಿಗೆ ತರವಲ್ಲದ ರೀತಿಯಲ್ಲಿ ನಡೆದುಕೋಡಿರುತ್ತಾರೆಂದು ಮೇಲ್ನೋಟಕ್ಕೆ ಕಂಡು ಬಂದಿರುತ್ತದೆ.

ಆದ್ದರಿಂದ, ಈ ಪ್ರಕರಣದಲ್ಲಿ ಹಾಜರುಪಡಿಸಿರುವ ದಾಖಲೆಗಳು, ನೀಡಿರುವ ಮಾಹಿತಿಗಳು, ಇತ್ಯಾದಿಗಳಿಂದ ಎದುರುದಾರರು ಸಾರ್ವಜನಿಕ/ಸರ್ಕಾರಿ ನೌಕರರಾಗಿದ್ದು, ತಮ್ಮ ಕರ್ತವ್ಯ ಪರಿಪಾಲನೆಯಲ್ಲಿ ನಿಷ್ಠೆಯನ್ನು ತೋರದೆ, ಕರ್ತವ್ಯಲೋಪವೆಸಗಿ, ದುರ್ವರ್ತನೆ ತೋರಿಸಿ, ಸಾರ್ವಜನಿಕ ನೌಕರರಿಗೆ ತರವಲ್ಲದ ರೀತಿಯಲ್ಲಿ ನಡೆದುಕೊಂಡಿರುವುದು ಮೇಲ್ನೋಟಕ್ಕೆ ಕಂಡುಬರುತ್ತಿರುವುದರಿಂದ, ಕರ್ನಾಟಕ ನಾಗರೀಕ ಸೇವೆ (ಸಿ.ಸಿ.ಎ) ನಿಯಮ 1966ರ ನಿಯಮ 3(1)(i) ಮತ್ತು (iii) ರನ್ವಯ ಶಿಸ್ತು ಕ್ರಮಕ್ಕೆ ಬಾಧ್ಯರಾಗಿರುತ್ತಾರೆಂದು ಕಂಡುಬಂದಿದ್ದರಿಂದ ಕರ್ನಾಟಕ ಲೋಕಾಯುಕ್ತ ಕಾಯಿದೆ ಕಲಂ 12(3) ರನ್ವಯ ಪ್ರದತ್ತವಾದ ಅಧಿಕಾರದಲ್ಲಿ ಶ್ರೀ ಭಾಸ್ಕರ, ಪಂಚಾಯಿತಿ ಅಭಿವೃದ್ಧಿ ಅಧಿಕಾರಿ, ಆಲೂರು ಗ್ರಾಮಪಂಚಾಯತಿ ಮತ್ತು ಅಂಚೆ, ದಾಸನಪುರ ಹೋಬಳಿ, ಬೆಂಗಳೂರು ನಗರ ಜಿಲ್ಲೆ ಸದರಿಯವರ ವಿರುದ್ಧ ಇಲಾಖಾ ವಿಚಾರಣೆ ನಡೆಸಲು ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿ 1957 ನಿಯಮ 14 (ಎ)ರಡಿ ಮಾನ್ಯ ಉಪಲೋಕಾಯುಕ್ತರಿಗೆ ವಹಿಸುವಂತೆ ಶಿಫಾರಸ್ಸು ಮಾಡಿರುತ್ತಾರೆ.

ಸರ್ಕಾರವು ಮಾನ್ಯ ಉಪಲೋಕಾಯುಕ್ತರ ವರದಿಯನ್ನು ಪರಿಶೀಲಿಸಿ ಈ ಪ್ರಕರಣದಲ್ಲಿ ಒಳಗೊಂಡಿರುವ ನೌಕರರ ವಿರುದ್ಧ ವಿಚಾರಣೆ ನಡೆಸುವುದು ಸೂಕ್ತವೆಂದು ಭಾವಿಸಿ ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಗಳು, 1957ರ ನಿಯಮ 14-ಎ ರನ್ವಯ ಪ್ರಕರಣವನ್ನು ಮಾನ್ಯ ಉಪಲೋಕಾಯುಕ್ತರಿಗೆ ವಹಿಸುವ ಸಲುವಾಗಿ ಈ ಕೆಳಕಂಡಂತೆ ಆದೇಶಿಸಿದೆ.

**<u>ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ/657/ಗ್ರಾಪಂಕಾ/2017 ಬೆಂಗಳೂರು, ದಿನಾಂಕ: 24-08-2017.</u>**

ಪ್ರಸ್ತಾವನೆಯಲ್ಲಿ ವಿವರಿಸಲಾದ ಅಂಶಗಳ ಹಿನ್ನೆಲೆಯಲ್ಲಿ ಶ್ರೀ. ಭಾಸ್ಕರ, ಪಂಚಾಯಿತಿ ಅಭಿವೃದ್ಧಿ ಅಧಿಕಾರಿ, ಆಲೂರು ಗ್ರಾಮಪಂಚಾಯತಿ ಮತ್ತು ಅಂಚೆ, ದಾಸನಪುರ ಹೋಬಳಿ, ಬೆಂಗಳೂರು ನಗರ ಜಿಲ್ಲೆ ಇವರ ವಿರುದ್ಧ ಇಲಾಖಾ ವಿಚಾರಣಾ ನಡೆಸಲು ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಗಳು 1957ರ ನಿಯಮ 11ರ ಅನುಸಾರ ಇಲಾಖಾ ವಿಚಾರಣೆ ನಡೆಸಲು ಸದರಿ ನಿಯಮಗಳು ನಿಯಮ 14-ಎ ಅಡಿ ಮಾನ್ಯ ಉಪಲೋಕಾಯುಕ್ತರಿಗೆ ವಹಿಸಿದೆ.

ಈ ಪ್ರಕರಣದಲ್ಲಿ ಸರ್ಕಾರವು ಶಿಸ್ತು ಪ್ರಾಧಿಕಾರವಾಗಿದ್ದು, ಆಪಾದಿತರಿಗೆ, ನಿಯಮಾನುಸಾರ ಸೂಕ್ತ ದಂಡನೆ ವಿಧಿಸಲು ಸಕ್ಷಮ ಪ್ರಾಧಿಕಾರವಾಗಿರುತ್ತದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ<br>ಮತ್ತು ಅವರ ಹೆಸರಿನಲ್ಲಿ,

(ಟಿ.ವಿ. ಅರುಣ್‌ಕುಮಾರ್)<br>ಉಪನಿರ್ದೇಶಕರು ಹಾಗೂ ಪದನಿಮಿತ್ತ<br>ಸರ್ಕಾರದ ಅಧೀನ ಕಾರ್ಯದರ್ಶಿ,<br>ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ.

<u>**ಗೆ,**</u>

1. ಮಹಾಲೇಖಪಾಲರು, ಕರ್ನಾಟಕ, ಬೆಂಗಳೂರು.

2. ಮಾನ್ಯ ಉಪಲೋಕಾಯುಕ್ತರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು.
3. ನಿಬಂಧಕರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು. (ಪುಟ 1 ರಿಂದ 371 ರವರೆಗಿನ ಮೂಲ ದಾಖಲೆಗಳನ್ನು ಇದರೊಂದಿಗೆ ಲಗತ್ತಿಸಿ ಹಿಂದಿರುಗಿಸಿದೆ).
4. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತಿ, ಬೆಂಗಳೂರು ನಗರ ಜಿಲ್ಲೆ.
5. ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯತಿ ಬೆಂಗಳೂರು ಉತ್ತರ, ಬೆಂಗಳೂರು ನಗರ ಜಿಲ್ಲೆ.
6. ಶ್ರೀ ಭಾಸ್ಕರ, ಪಂಚಾಯಿತಿ ಅಭಿವೃದ್ಧಿ ಅಧಿಕಾರಿ, ಆಲೂರು ಗ್ರಾಮಪಂಚಾಯತಿ ಮತ್ತು ಅಂಚೆ, ದಾಸನಪುರ ಹೋಬಳಿ, ಬೆಂಗಳೂರು ನಗರ ಜಿಲ್ಲೆ.
7. ಗಣಕಕೋಶ.
8. ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿ.